ಪ್ರಕಟಣೆ

ಅಧ್ಯಕ್ಷರು : ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಂದಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಗಳು ನಿಯಮ 114ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 1ನೇ ಸೆಪ್ಟೆಂಬರ್ 1994 ರಂದು ಈ ಕೆಳಕಂಡ ವಿಧೇಯಕವು ಯಾವುದೇ ತಿದ್ದುಪಡಿ ಇಲ್ಲದೇ ಅನುಮೋದಿಸಿತು ಎಂದು ತಿಳಿಸಪಡಿಸುತ್ತೇನೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1994
ಹಾಗೂ ಕರ್ನಾಟಕ ವಿಶೇಷ ನ್ಯಾಯಾಧೀಕರಣ ವಿಧೇಯಕ 1994

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ :

ವಿಷಯ : ನಾಲ್ಕನೇ ದರ್ಜೆಯ ನೌಕರರ ಮುಷ್ಕರದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾಲ್ಕನೇ ದರ್ಜೆಯ ನೌಕರರು ಇವತ್ತು ಮುಷ್ಕರ ಹೂಡಿದ್ದಾರೆ. ಇದರ ವಿಧಾನಸಭೆಯಲ್ಲಿಯೂ ಇದರ ಪರಿಣಾಮ ಬೀರಿ ಗಂಭೀರವಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಈ ಬಗ್ಗೆ ಸರ್ಕಾರ ಅವರನ್ನು ಕರೆದು ಮಾತುಕತೆ ಆಡಿ ಅವರ ಬೇಡಿಕೆಗಳು ಏನು ಎಂದು ಕೇಳತಕ್ಕ ಸೌಜನ್ಯ ತೋರಿಸಬೇಕು. ಇದುವರೆಗೆ ಆ ಸೌಜನ್ಯ ತೋರಿಲ್ಲ. ನಾನು ತಮ್ಮ ಮೂಲಕ ಕೇಳುತ್ತೇನೆ. ಸರ್ಕಾರದ ಪರವಾಗಿ ಯಾರು ಇದ್ದಾರೆ ಅವರು ಒಂದು ಹೇಳಿಕೆ ಕೊಡಬೇಕು. ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಅವರ ಬೇಡಿಕೆಗಳು ಈಡೇರಿಕೆಗೆ ಒಂದೇ ಸಮನೆ ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಯಾರು ಅವರ ಪರವಾಗಿ ಉತ್ತರ ಅಥವಾ ಹೇಳಿಕೆ ಕೊಡುತ್ತಾರೆ.

ಅಧ್ಯಕ್ಷರು : ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ.

ಶ್ರೀ ಹೆಚ್. ಎಂ. ರೇವಣ್ಣ (ಕೃಷಿಖಾತೆ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಯಿಸಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರ ಛೇಂಬರಿನಲ್ಲಿ ಮಾತುಕತೆ ನಡೆಯುತ್ತಿದೆ.

ವಿಷಯ : ಲೋಕಸೇವಾ ಆಯೋಗದಲ್ಲಿ ನಡೆಯಿತೆನ್ನಲಾದ ಅವ್ಯವಹಾರ.

* ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಕೆಲವು ದಾಖಲೆಗಳನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇನೆ. ಕರ್ನಾಟಕ ಲೋಕಸಭಾ ಆಯೋಗದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಸುಮಾರು 25 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರತಕ್ಕವರಿಗೆ ಅನ್ಯಾಯ ಆಗಿದೆ, ಈ ಪರೀಕ್ಷೆಯನ್ನು ರದ್ದು ಮಾಡಿ, ಹೊಸದಾಗಿ ಪರೀಕ್ಷೆ ನಡೆಸಲು ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ನಾನು ಇನ್ನೂ ಕೆಲವು ದಾಖಲೆಗಳನ್ನು